**ಸಿ.ಸಿ. ನಂ. 874/2016**

**ಸಾಕ್ಷಿಃ ಸಿ.ಡಬ್ಲ್ಯೂ6, ಪಿ.ಡಬ್ಲ್ಯೂ5**

| | |
|---|---|
| ಸಾಕ್ಷಿದಾರನ ಹೆಸರು | : ಹರ್ಷ ಕೆ |
| ತಂದೆ ಹೆಸರು | : ಕಣುಮಣ್ಣ ಕೆ |
| ವಯಸ್ಸು | : 38 ವರ್ಷ |
| ಉದ್ಯೋಗ | : ಪಿಡಿಓ, ಹನಿಕೆ ಗ್ರಾಮ ಪಂಚಾಯಿತಿ |
| ವಾಸಸ್ಥಳ | : ಹಾಸನ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 14-08-2025.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು 26-06-2010 ರಿಂದ 03-08-2016 ರವರೆಗೆ ಯಮಸಂಧಿ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಅಬಕಾರಿ ಪೋಲೀಸರು ಎ ಬಿ ಧರ್ಮೇಶ್ ರವರ ಮನೆಯ ಮಾಲೀಕತ್ವ ಕೋರಿ ದಾಖಲೆ ನೀಡುವಂತೆ ಮನವಿ ಪತ್ರ ಕೊಟ್ಟಿದ್ದು ಆ ಬಗ್ಗೆ ನಾನು ಸದರಿ ಮನೆ ಆರೋಪಿ ತಂದೆ ಹೆಸರಿನಲ್ಲಿ ಇರುವ ಬಗ್ಗೆ ದೃಢೀಕರಣ ಪತ್ರ ನೀಡಿರುತ್ತೇನೆ.

ಸಾಕ್ಷಿಯು ಅಬಕಾರಿ ಪೊಲೀಸರು ಬರೆದ ಪತ್ರವನ್ನು ನೋಡಿ ಗುರ್ತಿಸಿದ್ದು ಸದರಿ ದಾಖಲೆಯನ್ನು ನಿಪಿ-6 ಎಂದು ಗುರುತಿಸಲಾಯಿತು.

ಸಾಕ್ಷಿ ದೃಢೀಕರಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಎಂ ಪಿ ವಕೀಲರಿಂದ**

ಅಬಕಾರಿ ನಿರೀಕ್ಷಕರು ಆರೋಪಿ ಮನೆಗೆ ಸಂಬಂದಿಸಿದ ಮಾಲೀಕತ್ವ ಕೋರಿ ದಾಖಲೆ ನೀಡುವಂತೆ ದಿಃ13-09-2015 ರಂದು ಮನವಿ ಕೊಟ್ಟಿರುತ್ತಾರೆ. ಆರೋಪಿಗೆ ಸಂಬಂದಿಸಿದ ಯಾವುದೇ ದಾಖಲೆಯನ್ನು ಅಬಕಾರಿ ಪೊಲೀಸರಿಗೆ ನೀಡಿರುವುದಿಲ್ಲ. ನಿಪಿ-7 ರಲ್ಲಿ ಎ ಬಿ ಧರ್ಮೇಶ್ ರವರ ತಂದೆ ಬೋರಣ್ಣಗೌಡ ಬಿನ್ ರಂಗೇಗೌಡ ಎಂದು ನಮೂದಿಸಿರುವುದಿಲ್ಲ. ಬೋರಣ್ಣಗೌಡ ಬಿನ್ ರಂಗೇಗೌಡ ರವರಿಗೆ ಸಂಬಂದಿಸಿದ ಯಾವುದೇ ದಾಖಲೆಯನ್ನು ಅಬಕಾರಿ ಪೊಲೀಸರಿಗೆ ಕೊಟ್ಟಿರುವುದಿಲ್ಲ. ದೃಢೀಕರಣ ಕೋರಿ ಪತ್ರ ಬರೆದಿದ್ದರಿಂದ ದೃಢೀಕರಣ ಪತ್ರವನ್ನು ಕೊಟ್ಟಿರುತ್ತೇನೆ.

ಅಬಕಾರಿ ನಿರೀಕ್ಷಕರ ಮಾತನ್ನು ಕೇಳಿ ಅವರಿಗೆ ಬೇಕಾದ ರೀತಿ ದಾಖಲೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–7 ಕ್ಕು ಮತ್ತು ಆರೋಪಿಗು ಸಂಬಂದ ಇಲ್ಲ ಎಂದರೆ ಸರಿಯಲ್ಲ. ಅಬಕಾರಿ ನಿರೀಕ್ಷಕರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಅದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ನ್ಯಾಯಾಲಯ ಬೇಲೂರು